ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಹೆಸ್ಕಾಂ ಇಲಾಖೆಯಲ್ಲಿ ಟಿ.ಸಿ./ಕಂಬ/ವಿದ್ಯುತ್ ತಂತಿ/ಸರಬರಾಜು ಕುರಿತು

ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

728 (679) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರೈತರ ಹೊಲದಲ್ಲಿ ಇಲಾಖೆ ವತಿಯಿಂದ ಅಳವಡಿಸಿದ ಟಿ.ಸಿ.ಗಳು ಸುಟ್ಟು ಹೋದಲ್ಲಿ ಎಷ್ಟು ದಿನಗಳೊಳಗಾಗಿ ಅವುಗಳನ್ನು ಇಲಾಖೆಯವರು ಅಳವಡಿಸಬೇಕು ; ರೈತರು ಟಿ.ಸಿ. ಸುಟ್ಟ ಬಗ್ಗೆ ಯಾರಿಗೆ ತಿಳಿಸಬೇಕು ; ತಿಳಿಸಿದ ಎಷ್ಟು ದಿನಗಳೊಳಗಾಗಿ ಇಲಾಖೆಯವರು ಹೊಸ ಟಿ.ಸಿ. ಅಳವಡಿಸುವರು ; ಇಲಾಖೆಯವರೇ ತಮ್ಮ ವಾಹನದಿಂದ ತಂದು ಅಳವಡಿಸುವರೆ ಅಥವಾ ರೈತರೇ ತಮ್ಮ ಟ್ರಾಕ್ಟರ್ ತಂದಾಗ ಮಾತ್ರ ಇಲಾಖೆಯವರು ಟಿ.ಸಿ. ಒದಗಿಸುವರೇ ;

(ಆ) ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ಇಲಾಖೆಯವರು ಅಳವಡಿಸಿದ ಟಿ.ಸಿ.ಗಳು ಸುಟ್ಟಾಗ ಇಲಾಖೆಗೆ ತಿಳಿಸಿದರೂ ಇಲಾಖೆಯಲ್ಲಿ ಟಿ.ಸಿಗಳು ಇರುವುದಿಲ್ಲ ಎಂದು ಅಧಿಕಾರಿಗಳು ಹೇಳುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ಟಿ.ಸಿ. ಅಳವಡಿಸದೇ ಇದ್ದಲ್ಲಿ, ರೈತರ ಬೆಳೆಗಳು ನಾಶವಾದಲ್ಲಿ ಇದಕ್ಕೆ ಜವಾಬ್ದಾರರು ಯಾರು ; ಬೆಳೆ ನಾಶವಾದ ಬಗ್ಗೆ ಪರಿಹಾರ ಪಡೆಯಲು ರೈತರು ಯಾರನ್ನು ಸಂಪರ್ಕಿಸಬೇಕು ;

(ಈ) ರೈತರ ಹೊಲದಲ್ಲಿ ವಿದ್ಯುತ್ ತಂತಿಗಳು ಜೋತು ಬಿದ್ದು, ಕಬ್ಬಿನ ಗದ್ದೆ ಸುಟ್ಟು ಹೋಗುತ್ತಿದ್ದರು ಮತ್ತೊಂದು ಕಂಬ ಹಾಗೂ ಅದಕ್ಕೆ ಉಪಕರಣ ಮತ್ತು ತಂತಿಯನ್ನು ಸರ್ಕಾರ ನೀಡುವುದೇ;

(ಉ) ಕಡಿಮೆ ವೋಲ್ಟೇಜ್ ದಿಂದ ರೈತರ ಪಂಪ್ ಸೆಟ್ ಸುಡುತ್ತಿದ್ದು ಇದಕ್ಕೆ ಜವಾಬ್ದಾರರು ಯಾರು ; ಇಲಾಖೆಯ ಅಧಿಕಾರಿಗಳು ರೈತರಿಗೆ ಸರಿಯಾಗಿ ವೋಲ್ಟೇಜ್ ಬರುತ್ತಿದೆಯೋ ಇಲ್ಲವೋ ಎಂದು ತಪಾಸಣೆ ಮಾಡುವರೇ ; ಹಾಗಿದ್ದಲ್ಲಿ, ಕಳೆದ 5 ವರ್ಷಗಳಿಂದ ಕಾರವಾರ ಜಿಲ್ಲೆಯ ಹಳಿಯಾಳ/ಜೋಯಿಡಾ ತಾಲ್ಲೂಕಿನಲ್ಲಿ ಎಷ್ಟು ಟಿ.ಸಿ.ಗಳು ಹಾಳಾಗಿದ್ದು ಹಾಗೂ ಎಷ್ಟು ಟಿ.ಸಿ.ಗಳನ್ನು ಸರಿಪಡಿಸಲಾಗಿರುತ್ತದೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಎಷ್ಟು ಸ್ಥಳಗಳಲ್ಲಿ ತಪಾಸಣೆ ಮಾಡಿರುವರು ; ಇದಕ್ಕೆ ತಗುಲಿದ ವೆಚ್ಚ ಎಷ್ಟು ; ಸವಿಸ್ತಾರ ವರದಿ ನೀಡುವುದು;

(ಊ) ಹೊಸದಾಗಿ (ಹತ್ತು ಎಚ್.ಪಿ. ಒಳಗೆ) ವಿದ್ಯುತ್ ಬೇಕಾದಲ್ಲಿ ಯಾರಿಗೆ ಅರ್ಜಿಯನ್ನು ಸಲ್ಲಿಸಬೇಕು ; ಇದಕ್ಕಾಗಿ ಯಾವ ಕ್ರಮಗಳನ್ನು ಅನುಸರಿಸಬೇಕು ;

(ಋ) ಕಳೆದ 5 ವರ್ಷಗಳಲ್ಲಿ ವಿದ್ಯುತ್ ಕಂಬ ಹಾಗೂ ವಿದ್ಯುತ್ ತಂತಿಯನ್ನು ಹಳಿಯಾಳ/ಜೊಯಿಡಾ ತಾಲ್ಲೂಕಿನಲ್ಲಿ ಸರಬರಾಜು ಮಾಡಿರುವ ವಿವರಗಳನ್ನು ನೀಡುವುದು ಹಾಗೂ ಇದರ ಖರೀದಿಗೆ ಇರುವ ಮಾನದಂಡಗಳೇನು ; ಬಂದಿರುವ ವಿದ್ಯುತ್ ಕಂಬ ಹಾಗೂ ತಂತಿ ಅಳವಡಿಸಿರುವ ಮಾರ್ಗಗಳ ಸಂಪೂರ್ಣ ವಿವರ ನೀಡುವುದು ?